ಆರ್ಥಿಕವಾಗಿ ಹಿಂದುಳಿದ ವರ್ಗದವರಿಗೆ ಹಸಿರು ಕಾರ್ಡುಗಳ ಹಂಚಿಕೆ.

1595 - ಶ್ರೀ ಜಿ.ಆರ್. ನಾರಾಯಣ, (ಬೆಳ್ಳಾವಿ) : ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಆರ್ಥಿಕವಾಗಿ ಹಿಂದುಳಿದ ವರ್ಗಗಳ ಜನರಿಗೆ ಹಸಿರು ಕಾರ್ಡುಗಳನ್ನು ಹಂಚುವ ಸಲುವಾಗಿ ಅರ್ಹ ವ್ಯಕ್ತಿಗಳನ್ನು ಗುರುತಿಸಲು ಹೊಸ ಸಮೀಕ್ಷೆಯನ್ನು ನಡೆಸಲು ಸರ್ಕಾರ ನಿರ್ಧರಿಸಿದೆಯೆ?

ಆ) ಹಾಗಿದ್ದಲ್ಲಿ ಸಮೀಕ್ಷೆಯನ್ನು ಯಾವಾಗ ನಡೆಸಲಾಗುವುದು?

ಇ) ಅನರ್ಹ ವ್ಯಕ್ತಿಗಳು ಪಡೆದಿರುವ ಹಸಿರು ಕಾರ್ಡುಗಳನ್ನು ಪಟ್ಟಿಯಿಂದ ತೆಗೆಯಲೂ ಸರ್ಕಾರವು ಕ್ರಮ ಕೈಗೊಳ್ಳುವುದೇ?

ಈ) ಹಾಗಿದಲ್ಲಿ ಈ ರೀತಿ ಅನಧಿಕೃತವಾಗಿ ಹಸಿರು ಕಾರ್ಡುಗಳನ್ನು ಹೊಂದಿರುವವರನ್ನು ಪಟ್ಟಿಯಿಂದ ತೆಗೆಯಲು ಸರ್ಕಾರ ಏನು ಕ್ರಮ ಕೈಗೊಂಡಿರುವುದು?

ಶ್ರೀ ಟಿ. ಎನ್. ನರಸಿಂಹಮೂರ್ತಿ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು :

ಅ) ಹೌದು.

ಆ) ಇಷ್ಟರಲ್ಲಿಯೆ.

ಇ) ಅನರ್ಹ ವ್ಯಕ್ತಿಗಳು ಪಡೆದಿರುವ ಹಸಿರು ಕಾರ್ಡುಗಳನ್ನು ಪತ್ತೆ ಹಚ್ಚಿ ಅವುಗಳನ್ನು ರದ್ದುಪಡಿಸಲು ಸರ್ಕಾರವು ಸಂಬಂಧಪಟ್ಟವರಿಗೆಲ್ಲಾ ನಿರ್ದೇಶನಗಳನ್ನು ನೀಡಿದೆ.

ಈ) ಅನಧಿಕೃತವಾಗಿ ಹಸಿರು ಪಡಿತರ ಚೀಟಿ ಪಡೆದವರನ್ನು ಪಟ್ಟಿಯಿಂದ ತೆಗೆಯಲು ಹಸಿರು ಪಡಿತರ ಚೀಟಿಯ ಬಣ್ಣ ಬದಲಾಯಿಸುವ ಪ್ರಸ್ತಾಪನೆ ಸರ್ಕಾರದ ಪರಿಶೀಲನೆಯಲ್ಲಿರುತ್ತದೆ.

ಮಂಡಲ ಪಂಚಾಯಿತಿ ಕಾರ್ಯಗಳ ಮೇಲೆ ಸರ್ಕಾರದ ಹಂತ

1380 - ಶ್ರೀ ಆರ್. ಬಿ. ಚೌಧರಿ (ಸಿಂಧಗಿ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿರುವ ಮಂಡಲ ಪಂಚಾಯತಿಗಳ ಕಾರ್ಯವೈಖರಿಗಳ ಮೇಲೆ ಸರ್ಕಾರ ಹಿಡಿತವನ್ನೇನಾದರೂ ಹೊಂದಿದೆಯೇ?

ಆ) ಹಾಗಿದ್ದಲ್ಲಿ ಅಂತಹ ನಿರ್ಬಂಧಗಳೇನು?

ಶ್ರೀ ಬಿ. ಬಸವಲಿಂಗಪ್ಪ (ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು)

ಅ) ಇಲ್ಲ.

ಈಗ ಕಾನೂನಿನ ಪ್ರಕಾರ ಹಿಡಿತದಲ್ಲಿಡಲು ಪ್ರಯತ್ನ ನಡೆಸಲಾಗುವುದು.

ಆ) ವಾರ್ಷಿಕ ಲೆಕ್ಕಪತ್ರಗಳ ಪರಿಶೀಲನೆ ಮತ್ತು ನಂತರದ ಕ್ರಮ.

ಮರಳಿನ ಸಾಗಾಣಿಕೆ ಮೇಲೆ ನಿರ್ಬಂಧ

1605 - ಶ್ರೀ ಪ್ರಭಾಕರ್ ಎಸ್. ರಾಣೆ. (ಕಾರವಾರ) : ಮಾನ್ಯ ಅರಣ್ಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಉತ್ತರ ಕನ್ನಡ ಜಿಲ್ಲೆಯ ಸೂಪಾ ತಾಲ್ಲೂಕಿನ ತಿನ್ನೇಘಾಟ್ ಹಾಗೂ ಜಗಲ್ಬೇಟೆ ಅರಣ್ಯ ವಲಯದಲ್ಲಿಯ ಉಸುಕು ತೆಗೆದು ಹೊರ ರಾಜ್ಯಕ್ಕೆ